ವಿಜಾಪುರನಗರದಲ್ಲಿ ಒಳಚರಂಡಿ ವ್ಯವಸ್ಥೆ

477 - ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಜಾಪುರ ನಗರದಲ್ಲಿ ಬೆಳೆಯುತ್ತಿರುವ ಬಡಾವಣೆಗಳಿಗೆ ಒಳಚರಂಡಿ ವ್ಯವಸ್ಥೆ ಮಾಡುವ ಉದ್ದೇಶ ಸರ್ಕಾರ ಹೊಂದಿದೆಯೇ? ಹಾಗಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು?*

ಆ) *ಇದಕ್ಕಾಗಿ ಈ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಈ ಯೋಜನೆ ಪೂರ್ಣಗೊಳ್ಳಲು ಬೇಕಾಗುವ ಹಣವೆಷ್ಟು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಈ ಬಗ್ಗೆ ಈವರೆಗೆ ಯಾವ ಪ್ರಸ್ತಾವನೆಯೂ ಸರ್ಕಾರದ ಮುಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಕೇರೂರು ಪಟ್ಟಣಕ್ಕೆ ಐ.ಡಿ.ಎಸ್.ಎಮ್.ಡಿ.ಯೋಜನೆ ಜಾರಿಗೊಳಿಸುವ ಬಗ್ಗೆ

480 - ಶ್ರೀ ಬಿ.ಬಿ. ಚಿಮ್ಮನ ಕಟ್ಟಿ (ಬಾದಾಮಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಕೇರೂರು ಪಟ್ಟಣ ಅಭಿವೃದ್ಧಿ ಆಗದೆ ಅತೀ ಹಿಂದುಳಿದಿರುವುದು ನಿಜವೇ?*

2) *ಹಾಗಿದ್ದಲ್ಲಿ ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ಮೀಸಲಾದ ಐಡಿಎಸ್ ಎಂ.ಟಿ ಯೋಜನೆಯನ್ನು 96-97ರಲ್ಲಿ ಅಳವಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? ಹಾಗಿದ್ದಲ್ಲಿ ವಿವರಗಳೇನು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

1. ಹೌದು.
2. 1996-97ನೇ ಸಾಲಿನಲ್ಲಿಲ್ಲ.

ಹುಬ್ಬಳ್ಳಿನಗರದಲ್ಲಿ ನಡೆಯುವ ಕೈಗಾರಿಕಾ ವಸ್ತುಪ್ರದರ್ಶನ ಇನಕಾಮೆಕ್ಸ್ 96ಕ್ಕೆ ತಗುಲಿದ ವೆಚ್ಚ

483 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿಗ್ರಾಮೀಣ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ಮಹಾನಗರದಲ್ಲಿ ನಡೆಯುತ್ತಿರುವ ಕೈಗಾರಿಕಾ ವಸ್ತುಪ್ರದರ್ಶನ 'ಇನಕಾಮೆಕ್ಸ್-96' ಇದಕ್ಕೆ ಇಲ್ಲಿಯವರೆಗೆ ತಗುಲಿದ ವೆಚ್ಚವೆಷ್ಟು.; ಉದ್ದಿಮೆದಾರರಿಂದ ಸ್ಥಾಲಗಳ ಮುಖಾಂತರ ಸಂಗ್ರಹವಾದ ಹಣವೆಷ್ಟು, ವಸ್ತು ಪ್ರದರ್ಶನದ ಜಾಗ ನೆಹರೂ*

ಮೈದಾನ ಆಟಗಾರರಿಗೆ ಮೊದಲಿದ್ದ ರೀತಿಯಲ್ಲಿಯೇ ಒದಗಿಸಿ ಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ದಿನಾಂಕ 25-2-1996ರವರೆಗೆ ರೂ. 39.30 ಲಕ್ಷ ಪ್ರದರ್ಶನಕ್ಕಾಗಿ ಖರ್ಚಾಗಿದೆ ಮತ್ತು ರೂ. 16.31 ಲಕ್ಷ ಮಳಿಗೆಗಳಿಂದ ಸಂಗ್ರಹವಾಗಿದೆ.

ಪ್ರದರ್ಶನ ಮುಕ್ತಾಯವಾದ ತಕ್ಷಣ ಮೈದಾನವನ್ನು ಮೊದಲಿನ ಸ್ಥಿತಿಗೆ ತರಲು ಕ್ರಮಕೈಗೊಳ್ಳಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಸ್ಮಶಾನ ಪ್ರದೇಶಗಳು ಸಂಖ್ಯೆ

484- ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ- ಧಾರವಾಡ ಮಹಾನಗರದಲ್ಲಿ ಇರುವ ಸ್ಮಶಾನ ಪ್ರದೇಶಗಳ ಒಟ್ಟು ಸಂಖ್ಯೆ ಎಷ್ಟು? (ಅವುಗಳ ವಿವರ ಒದಗಿಸುವುದು)

ಆ) ಇವುಗಳ ಸುಧಾರಣೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಮಹಾನಗರದ ಹೆಚ್ಚಳವಾದ ಜನಸಂಖ್ಯೆಗೆ ಅನುಗುಣವಾಗಿ ಇನ್ನೂ ಹೆಚ್ಚಿನ ಸ್ಮಶಾನ ಪ್ರದೇಶಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಆ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) 26.

ಏವರಗಳು : ಮಹಾನಗರ ಪಾಲಿಕೆಗೆ ಸೇರಿದ್ದು

1)	ವಿದ್ಯಾನಗರ	7)	ಅಮರ್ ಗೋಳ
2)	ಉಣಕಲ್	8)	ಬೆಂಗೇರಿ ಮತ್ತು ಗೋಪನ್ ಕೊಪ್ಪ
3)	ಮಂಟೂರ್ ರೋಡ್	9)	ಗಬ್ಬೂರ್
4)	ನಾರಾಯಣಪುರ	10)	ಉಣಕಲ್
5)	ಕೃಷ್ಣಾಪುರ	11)	ಮೈಲಾಲ್ ಲಿಂಗನಗುಡ್ಡ
6)	ನಾಗಶೆಟ್ಟಿ	12)	ಮೃತ್ಯುಂಜಯನಗರ